ಪಿ.ಡಬ್ಲ್ಯೂ- 1
ಸಿ.ಡಬ್ಲ್ಯೂ-1

ದಿನಾಂಕ 23-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್.ಎನ್ ಎಚ್ ವಕೀಲರಿಂದ**

6. ವಲಯ ಅರಣ್ಯ ಅಧಿಕಾರಿ ಕಚೇರಿ ರಾಮನಗುಳಿಯಲ್ಲಿ ಇದೆ ಎಂದರೆ ಸರಿ. ನಾನು ಹಳವಳ್ಳಿ ಯಲ್ಲಿ ವಾಸ್ತವ್ಯ ಇರುತ್ತೇನೆ. ಅಲ್ಲಿ ಅರಣ್ಯ ವಸತಿಗಳು ಇದೆ. ಆ ವಸತಿ ಗೃಹ ಹಳವಳ್ಳಿಯ ಅರಣ್ಯ ಸರ್ವೆ ನಂ 80 ಅ ದಲ್ಲಿ ಬರುತ್ತದೆ. ಚಾಸಾ-4 ರವರು ಕೂಡ ಅಲ್ಲೇ ವಸತಿ ಗೃಹದಲ್ಲಿ ಇರುತ್ತಾರೆ. ಹಳವಳ್ಳಿಯಲ್ಲಿ 2 ವಸತಿ ಗೃಹಗಳು ಇವೆ. ಕಚೇರಿ ಕೆಲಸ ಇದ್ದಾಗ ಮಾತ್ರ ರಾಮನಗುಳಿ ವಲಯ ಅರಣ್ಯಾಧಿಕಾರಿ ಕಚೇರಿಗೆ ಬರುತ್ತೇನೆ. ನನಗೆ ದಿನಚರಿ ಪುಸ್ತಕ ಇದೆ. ಆ ಪುಸ್ತಕದಲ್ಲಿ ಎಲ್ಲೆಲ್ಲಿ ಕೆಲಸ ಮಾಡಿದೆ ಎಂದು ನಮೂದಿಸಬೇಕು. ದಿನಾಂಕಃ 05-01-2022 ರಂದು ಹಳವಳ್ಳಿ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದೆ ಎಂದು ಆ ಪುಸ್ತಕದಲ್ಲಿ ನಮೂದಿಸಿದ್ದೇನೆ. ನನ್ನ ದಿನಚರಿ ಪುಸ್ತಕವನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ.

7. ನನಗೆ ಮಾಹಿತಿ ಬಂತು ಎಂದು ಹೇಳುವ ಸಮಯದಲ್ಲಿ ಹಳವಳ್ಳಿ, ಅರಣ್ಯ ಸರ್ವೆ ನಂ 80 ಅ ದಲ್ಲಿ ಗಸ್ತು ಮಾಡುತ್ತಿದ್ದೆ. ನನ್ನ ಹೇಳಿಕೆಯಲ್ಲಿ ಅರಣ್ಯ ಸರ್ವೆ ನಂ 80 ಅ ದಲ್ಲಿ ಗಸ್ತು ಮಾಡುತ್ತಿದ್ದೆ ಎಂದು ಹೇಳಿಲ್ಲ. ನನ್ನ ಪ್ರಕಾರ ಚಾಸಾ-4 ಹೊರತು ಪಡಿಸಿ ಬೇರೆ ಯಾರು ಗಸ್ತಿನಲ್ಲಿ ಇರಲಿಲ್ಲ. ಚಾಸಾ-2 ರವರು ನಮ್ಮ ಇಲಾಖೆಯಲ್ಲಿ ವಿಕ್ಷಕನಾಗಿ ಕೆಲಸ ಮಾಡುತ್ತಾರೆ ಹಾಗೂ ಚಾಸಾ-3 ರವರು ದಿನಗೂಲಿ ಕೆಲಸಕ್ಕೆ ಬರುತ್ತಾರೆ ಎಂದರೆ ಸರಿ . ಚಾಸಾ-2 ರವರು ನಮ್ಮ ಇಲಾಖೆಗೆ ಸೇರಿ ಸುಮಾರು 15 ವರ್ಷ ಮೇಲ್ಪಟ್ಟಿದೆ ಎಂದರೆ ಸರಿ. ಹಳವಳ್ಳಿ , ಕಮ್ಮಾಣಿ, ಮದ್ದಣ ಮನೆ, ಕಲ್ಲೇಶ್ವರ ಮುಂತಾದ ಪ್ರದೇಶ ಜನವಸತಿ ಇರುವ ಪ್ರದೇಶಗಳು ಎಂದರೆ ಸರಿ. ಮದ್ದಣ ಮನೆ ಪ್ರದೇಶದಲ್ಲಿ ಹಲವಾರು ಬ್ರಾಹ್ಮಣರ

ಹಾಗೂಾ ಸಿದ್ದಿ ಸಮುದಾಯದವರ ಮನೆಗಳಿವೆ ಎಂದರೆ ಸರಿ. ಸಾಕ್ಷಿ 2 ಬ್ರಾಹ್ಮಣರ ಮನೆಗಳು ಹಾಗೂ ಸುಮಾರು ಸಿದ್ದಿ ಸಮುದಾಯದವರ ಮನೆಗಳು ಇವೆ ಎಂದು ನುಡಿಯುತ್ತಾರೆ.

8. ಮುದ್ದಣ ಮನೆ ನಾಲ ಸಿರ್ಸಿ ತಾಲೂಕಿನಲ್ಲಿ ಪ್ರಾರಂಭವಾಗಿ ಕಮ್ಮಾಣಿ ಪ್ರದೇಶದ ಹಸೆಹಳ್ಳಕ್ಕೆ ಸೇರುತ್ತದೆ. ಹಸೆಹಳ್ಳ ದೊಡ್ಡ ಹಳ್ಳವಾಗಿದ್ದು ಸಾಕಷ್ಟು ನೀರು ಅದರಲ್ಲಿ ಹರಿದು ಹೋಗುತ್ತದೆ ಎಂದರೆ ಸರಿ. ನಿಪಿ-6 ರಲ್ಲಿ ಕಾಣುವ ಹಳ್ಳದಲ್ಲಿ ನೀರು ರಭಸವಾಗಿ ಹರಿಯುವದು ಕಾಣುವುದಿಲ್ಲ ಎಂದರೆ ಸಾಕ್ಷಿ ನೀರು ಸಣ್ಣ ಪ್ರಮಾಣದಲ್ಲಿ ಹರಿಯುತ್ತಿದೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ದೊಡ್ಡ ದೊಡ್ಡ ಕಲ್ಲುಗಳು ಬಿಟ್ಟರೆ ನೀರು ಹರಿಯುವದು ಕಾಣುವುದಿಲ್ಲ ಎಂದರೆ ಸರಿ. ನಾನು ಹೇಳಿದಂತಹ ಬೆಂಕಿ ಹಾಕಿದ ಜಾಗ ನಾಲದಲ್ಲೆ ಇರುತ್ತದೆ. ನಾನು ಹೇಳಿದಂತಹ ಸುಟ್ಟ ಹಂದಿ ನಾಲದಲ್ಲೇ ಇತ್ತು. ನನ್ನ ಪ್ರಕಾರ ನಾಲದಲ್ಲೆ ನೀರು ಹರಿಯುತ್ತಿತ್ತು. ನನ್ನ ಪ್ರಕಾರ ನಾವು ತೆಗೆದ ಪೊಟೊಗಳು 20 ಅಡಿ ಪ್ರದೇಶವನ್ನು ಆವರಿಸಿರುತ್ತದೆ. ನಿಪಿ-6 ರಲ್ಲಿ ನೀರು ಹರಿಯುವದು ಕಾಣುವುದಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಎಲ್ಲೂ ನೀರು ಹರಿಯುವುದು ಕಾಣುವುದಿಲ್ಲ ಎಂದರೆ ಸಾಕ್ಷಿ range officer ಹಿಂದುಗಡೆ ನೀರು ಹರಿಯುವದು ಕಾಣುತ್ತದೆ ಎಂದು ನುಡಿಯುತ್ತಾರೆ. ಯಾವುದೇ ಸ್ವತ್ತನ್ನು ಸುಡಲು ಕಟ್ಟಿಗೆ ಹಾಕಿ ಬೆಂಕಿ ಹಚ್ಚಬೇಕು ಎಂದರೆ ಸರಿ. ಕಟ್ಟಿಗೆಗೆ ಬೆಂಕಿ ಹಚ್ಚಿದಾಗ ಅದರ ಉರಿದ ಭಾಗ ಕಪ್ಪಗಾಗುತ್ತದೆ . ಆ ರೀತಿ ಕಪ್ಪಗಾಗಿ ಇರುವಂತಹ ಕಟ್ಟಿಗೆ ಪೊಟೊ ದಲ್ಲಿ ಕಾಣುವುದಿಲ್ಲ ಎಂದರೆ ಸರಿ. ನನ್ನ ಪ್ರಕಾರ ಸುಟ್ಟ ಜಾಗದಲ್ಲಿ ಪೊಟೊ ತೆಗೆದಿಲ್ಲ. ಪಂಚನಾಮೆಯಲ್ಲಿ ಸುಟ್ಟು ಜಾಗದಲ್ಲಿ ಸುಟ್ಟ ಕಟ್ಟಿಗೆಗಳು ಇತ್ತು ಎಂದು ಹೇಳಿಲ್ಲ. ಆ ರೀತಿ ನಮೂದಿಸಲು ತೊಂದರೆ ಇರಲಿಲ್ಲ.

9. ಯಾವುದೇ ಪ್ರಾಣಿಯನ್ನು ಸುಟ್ಟಾಗ ಅದರ ಕೂದಲುಗಳು ಹಾಗೂ ಚರ್ಮ ಹಾಗೂ ಮಾಂಸ ಮೃದುವಾಗಿ ಹೋಗುತ್ತದೆ ಎಂದರೆ ಸರಿ. ಮುಖ ಹಾಗೂ ಕಾಲುಗಳು ಕೂಡ ಸುಟ್ಟಾಗ ಕಪ್ಪಾಗುತ್ತದೆ ಎಂದರೆ ಸರಿ. ನನ್ನ ಪ್ರಕಾರ ನಿಪಿ-2 ರಲ್ಲಿ ಕಾಣುವ ಪ್ರಾಣಿ ಸುಟ್ಟು ತೊಳೆದ ಮೃತ ಪ್ರಾಣಿ ಎಂದು ನುಡಿಯುತ್ತಾರೆ. ಸುಟ್ಟ ಪ್ರಾಣಿಯನ್ನು ನೀರಿನಿಂದ ತೊಳೆದರೆ ಅದರ ಚರ್ಮ ಕಿತ್ತು ಬರುತ್ತದೆ ಎಂದರೆ ಸರಿ. ಸಾಕ್ಷಿ ಪುನಃ ಯಾವ ಪ್ರಮಾಣದಲ್ಲಿ ಸುಡಲಾಗಿದೆ ಅದಕ್ಕೆ ಅನುಗುಣವಾಗಿ ಚರ್ಮ ಕಿತ್ತು ಬರುತ್ತದೆ ಎಂದು ನುಡಿಯುತ್ತಾರೆ. ಬೆಂದ ಮಾಂಸ ಬಣ್ಣ ಕಂದು ಅಥವಾ ಸ್ವಲ್ಪ ಕಪ್ಪು ಬಣ್ಣಕ್ಕೆ ತಿರುಗುತ್ತದೆ ಎಂದರೆ ಸರಿ. ಯಾವುದೇ ಪ್ರಾಣಿಯನ್ನು ಸುಟ್ಟ ನಂತರ ಅದು ಇಂತಹದೇ ಪ್ರಾಣಿ ಎಂದು ಗುರುತಿಸಲಾಗುವುದಿಲ್ಲ ಎಂದರೆ ಸಾಕ್ಷಿ ಸುಟ್ಟ ಪ್ರಮಾಣದ ಮೇಲೆ ನಮಗೆ ಗುರುತಿಸಲಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಆ ಪ್ರಾಣಿಯ ಗೊರಸು ಸುಟ್ಟಾಗಿ ಕಾಣುವುದಿಲ್ಲ ಎಂದರೆ ಸಾಕ್ಷಿ ಕಾಲನ್ನು ಮೇಲೆ ಮಾಡಿ ಸುಟ್ಟಾಗ ಅದು ಸುಡದೇ ಇರಬಹುದು ಎಂದು ನುಡಿಯುತ್ತಾರೆ. ಯಾವುದೇ ಪ್ರಾಣಿಯ ಕಾಲು ಮೇಲೆ ಮಾಡಿ ಸುಡಬೇಕಾದರೆ ಅದನ್ನು ಮೇಲಕ್ಕೆ ಎತ್ತಿ ಸಮಾಂತರವಾಗಿ ಜೋಡಿಸಿದ ಮರದ ತುಂಡಿಗೆ ಕಟ್ಟಿ ಸುಡಬೇಕಾಗುತ್ತದೆ ಎಂದರೆ ಸರಿ. ನಾಲ್ಕೈದು ಅಡಿ ಪ್ರದೇಶದಲ್ಲಿ ಕಟ್ಟಿಗೆ ಸುಟ್ಟ ಬಾಬ್ತು ಬೂದಿ ಹಾಗೂ ಇದ್ದಿಲು ಬಿದ್ದಿತ್ತು . ಅದನ್ನು ಪೊಟೊ ತೆಗೆಯಲು ತೊಂದರೆ ಇರಲಿಲ್ಲ. ನಾಲದಲ್ಲಿ ನೀರು ಹರಿಯುತ್ತಿದ್ದ ಜಾಗದಿಂದ 3-4 ಅಡಿ ದೂರದಲ್ಲಿ ನಾಲದಲ್ಲಿಯೇ ಆ ಸುಟ್ಟ ಜಾಗ ಇತ್ತು. ಬೆಂಕಿ ಸುಡಲು ಸಮತಟ್ಟು ಪ್ರದೇಶಬೇಕು ಎಂದರೆ ಸಾಕ್ಷಿ ಸಮತಟ್ಟು ನೆಲ ಅಥವಾ ಕಲ್ಲಿನ ಮೇಲೆ ಸುಡಬಹುದು ಎಂದು

ನುಡಿಯುತ್ತಾರೆ. ನಿಪಿ–5 ರಲ್ಲಿ ಕಾಣುವ ಕಲ್ಲಿನ ಮೇಲೆ ಬೆಂಕಿ ಹಾಕಿದ್ದರು. ಅಲ್ಲಿ ಕಟ್ಟಿಗೆ, ಬೂದಿ ಹಾಗೂ ಇದ್ದಿಲು ಕಾಣುವುದಿಲ್ಲ ಎಂದರೆ ಸರಿ. ನಿಪಿ–5 ರಲ್ಲಿ ಕಾಣುವ ಜಾಗದಲ್ಲಿ ನೀರಿನಿಂದ ತೊಳೆದಿರುವುದರಿಂದ ಕಾಣುವುದಿಲ್ಲ. ನನ್ನ ಪ್ರಕಾರ ತೊಳೆದ ಅಂದಾಜು ಒಂದು ಗಂಟೆ ನಂತರ ಅಲಿಲ ಹೋಗಿದ್ದೆವೆ. ನೀರಿನಿಂದ ತೊಳೆದಾಗ ಇದ್ದಿಲು ಹಾಗೂ ಬೂದಿಯ ಬಣ್ಣ ಅಲ್ಲಿ ಮೆತ್ತಿರುವುದು ಕಾಣುತ್ತದೆ ಎಂದರೆ ಸಾಕ್ಷಿ ಸಣ್ಣ ಪ್ರಮಾಣದ ನೀರಿನಲ್ಲಿ ತೊಳೆದರೆ ಆ ರೀತಿ ಕಾಣುತ್ತದೆ ಹಾಗೂ ಜಾಸ್ತಿ ನೀರಿನಲ್ಲಿ ತೊಳೆದರೆ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಜಾಸ್ತಿ ನೀರು ಹಾಕಿ ತೊಳೆದರೂ ಕೂಡಾ ಅದು ಹರಿದು ಬಂದು ಶೇಖರಣೆಯಾದ ಜಾಗದಲ್ಲಿ ಬೂದಿ ಹಾಗೂ ಇದ್ದಿಲಿನ ಕುರುಹು ಕಾಣುತ್ತದೆ ಎಂದರೆ ಸರಿ . ನಿಪಿ–5 ರಲ್ಲಿ ಆ ರೀತಿಯ ಕುರುಹು ಕಾಣುವುದಿಲ್ಲ ಎಂದರೆ ಸರಿ.

10. ಯಾವುದೇ ಪ್ರಾಣಿಯನ್ನು ಮಾಂಸ ಮಾಡಲು ಸುಟ್ಟಾಗ, ಬಿಸಿ ಇದ್ದಾಗಲೇ ಚರ್ಮ ಕೀಳಲು ಆಗುವುದು ಎಂದರೆ ಸರಿ . ನಾನು ಹೇಳುವಂತಹ ಕಲ್ಲನ್ನು ನೀರಿನಿಂದ ತೊಳೆಯಲು ಬಕೆಟ್ ಅಥವಾ ಕೊಡದ ಅವಶ್ಯಕತೆ ಇದೆ ಎಂದರೆ ಸಾಕ್ಷಿ ಕೈ ಯಿಂದ ನೀರು ತಂದು ತೊಳೆಯಬಹುದು ಎಂದು ನುಡಿಯುತ್ತಾರೆ. ನಿಪಿ–5 ರಲ್ಲಿ ಕಾಣುವ ಕಲ್ಲಿನಿಂದ 2 ಅಡಿ ದೂರದಲ್ಲಿ ನೀರು ಹರಿಯುತ್ತದೆ . ಅದರಲ್ಲಿ ಕಾಣುವ ಆ ಕಲ್ಲು ಸುಮಾರು 2 ½ ಅಡಿ ಎತ್ತರ ಇದೆ. ಆ ಕಲ್ಲಿನಲ್ಲಿ ಇತ್ತು ಎಂದು ಹೇಳುವ ಬೂದಿ ಹಾಗೂ ಇದ್ದಿಲುಗಳನ್ನು ನೀರಿನಿಂದ ತೊಳೆಯಲು ಕೈಯಲ್ಲಿ ನೀರು ತಂದು ತೊಳೆಯಲು ಸುಮಾರು 1–00 ಗಂಟೆ ಬೇಕಾಗುವುದು. ಪಂಚನಾಮೆಯಲ್ಲಿ ಕೈಯಿಂದ ನೀರನ್ನು ತಂದು ಕಲ್ಲನ್ನು ತೊಳೆದರು

ಎಂದು ಹೇಳಿಲ್ಲ. ಪ್ರಾಣಿಯನ್ನು ಮಾಂಸ ಮಾಡಲು ಹಾಗೂ ಚರ್ಮ ಕೀಳಲು ಕತ್ತಿ ಬೇಕಾಗುತ್ತದೆ ಎಂದರೆ ಸರಿ. ಅಲ್ಲಿ ಚಾಕುಗಳು ಅಥವಾ ಕತ್ತಿ ಇರಲಿಲ್ಲ. ಅಲ್ಲಿ ಬೆಂಕಿ ಪೊಟ್ಟಣ ಅಥವಾ ಲೈಟರ್ ಗಳು ಸಿಗಲಿಲ್ಲ. ಸುಟ್ಟ ಪ್ರಾಣಿ ಇಂತಹದೇ ಪ್ರಾಣಿ ಎಂದು ಗುರುತಿಸಲು ನನಗೆ ವಿಶೇಷ ತರಬೇತಿ ಆಗಿಲ್ಲ. ಕಾಡುಹಂದಿಗೆ ಸಣ್ಣ ಬಾಲ ಇರುತ್ತದೆ ಎಂದರೆ ಸರಿ. ನಿಪಿ-5 ರಲ್ಲಿ ಕಾಣುವ ಪ್ರಾಣಿಗೆ ಬಾಲ ಇರುವುದು ಕಾಣುವುದಿಲ್ಲ. ನಿಪಿ-5 ರಲ್ಲಿ ಕಾಣುವ ಪ್ರಾಣಿಯ ತಲೆ ನೋಡಿದಾಗ ಕಾಡುಹಂದಿ ತಲೆಯ ತರಹ ಕಾಣುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಆ ಪ್ರಾಣಿಯ ತಲೆಯ ಭಾಗವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ. ಯಾವುದೇ ಪ್ರಾಣಿಯ ಹಾಗೂ ಅಸ್ತಿ ಪಂಜರವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸದ ಹೊರತು ಆ ಪ್ರಾಣಿ ಇಂತಹದೆ ಪ್ರಾಣಿ ಎಂದು ವರದಿ ನೀಡಲು ಆಗುವುದಿಲ್ಲ ಎಂದರೆ ಸಾಕ್ಷಿ ಮಾಂಸವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ಇಂತಹ ಪ್ರಾಣಿ ಎಂದು ವರದಿ ನೀಡಲು ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ನಾನು ಹೇಳಿದ ಪ್ರಾಣಿಯ ತೊಡೆಯ ಭಾಗದ ಮಾಂಸವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದೆ. ತಲೆಯ ಭಾಗ, ಚರ್ಮ, ಅಸ್ತಿಪಂಜರ ಹಾಗೂ ಗೊರಸನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ತೊಂದರೆ ಇರಲಿಲ್ಲ.

11. 1 ನೇ ಆರೋಪಿಯ ಮನೆ ಮತ್ತು ತೋಟ ಅರಣ್ಯ ಅತಿಕ್ರಮಣ ಜಾಗದಲ್ಲಿ ಬರುತ್ತದೆ. ಆ ಮನೆಗೆ ಗ್ರಾಮ ಪಂಚಾಯತಿಯಲ್ಲಿ ಮನೆ ನಂಬರ್ ನೀಡಿದ್ದಾರಾ ಎಂದು ನಾನು ವಿಚಾರಿಸಿಲ್ಲ. ಅವರ ಮನೆಗೆ ವಿದ್ಯುತ್ ಸಂಪರ್ಕ ಇತ್ತಾ ಎಂದು ವಿದ್ಯುತ್ ಇಲಾಖೆಗೆ ಪತ್ರ ಬರೆದು ಮಾಹಿತಿ ಪಡೆದಿಲ್ಲ. ಅವರ ತೋಟಕ್ಕೆ ಯಾವುದರಿಂದ ಬೇಲೆ ಮಾಡಿದ್ದಾರೆ ಎಂದು ಪೊಟೊ ತೆಗೆದಿಲ್ಲ. ಸಾಕ್ಷಿ ಸ್ವತಃ ಪಂಚನಾಮೆಯಲ್ಲಿ ನಮೂದಿಸಿದ್ದೆವೆ ಎಂದು ನುಡಿಯುತ್ತಾರೆ. ವಿದ್ಯುತ್ ಇಲಾಖೆಗೆ ನಾವು ವಿದ್ಯುತ್ ಕಳ್ಳತನ ಮಾಡಿದ್ದಾರೆ ಎಂದು ಮಾಹಿತಿ ನೀಡಿಲ್ಲ. ಐಬೆಕ್ಸ ನ್ನು ಬೇಲಿಗೆ ಯಾವ ರೀತಿ ಜೋಡಣೆ ಮಾಡುತ್ತಾರೆ ಎಂಬ ಮಾಹಿತಿ

ನನಗೆ ಇದೆ. ವಿದ್ಯುತ್ ಸಂಪರ್ಕ ಐಬೆಕ್ಸ ಗೆ ಕೊಡಬೇಕಾದರೆ ವಿದ್ಯುತ್ ಹರಿಯುವ ಪ್ಲಗ್ ಅಥವಾ ತಂತಿಯಿಂದ ಕೊಡಬೇಕು. ನ್ಯಾಯಾಲಯದ ಮುಂದಿರುವ ಮು.ಮಾ–1 ಕ್ಕೆ ವಿದ್ಯುತ್ ಹಾಯಿಸಬೇಕಾದರೆ ಅಲ್ಯೂಮಿನಿಯಂ ಸರ್ವಿಸ್ ವಯರ್ ನಿಂದ ಸಂಪರ್ಕ ಕೊಡಬೇಕಾಗುತ್ತದೆ ಎಂದರೆ ಸರಿ. ನನ್ನ ಪ್ರಕಾರ ಅವರ ಬೇಲಿಗೆ ಅಲ್ಲಲ್ಲಿ ಆಯಬೆಕ್ಸ ತಂತಿ ಅಳವಡಿಸಲಾಗಿದ್ದು ಪೂರ್ತಿಯಾಗಿ ಇರಲಿಲ್ಲ. ಮು.ಮಾ–1 ರ ರೀತಿಯ ತಂತಿಯಿಂದ ವಿದ್ಯುತ್ ತರಲು ಆಗುವುದಿಲ್ಲ ಎಂದರೆ ಸರಿ. ಆಯಬೆಕ್ಸ ತಂತಿಗೆ ವಿದ್ಯುತ್ ಹಾಯಿಸಲು ಕಂಬ ಹಾಕಿ ಇನ್ಸೂಲೇಟರ್ ಹಾಕಿ ಸರ್ವಿಸ್ ವಯರ್ ಮೂಲಕ ಹಾಯಿಸಬೆಕಾಗುತ್ತದೆ ಎಂದರೆ ಸರಿ. ನನ್ನ ಪ್ರಕಾರ ವಿದ್ಯುತ್‌ನ್ನು ನೇರವಾಗಿ ವಿದ್ಯುತ್ ಕಂಬದಿಂದ ಹಾಯಿಸಿದ್ದರು. ವಿದ್ಯುತ್ ಕಂಬದಿಂದ ನೇರವಾಗಿ ವಿದ್ಯುತ್ ಹಾಯಿಸಲು ಫ್ಯೂಸ್ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ಫ್ಯೂಸ್ ಇಲ್ಲದೆ ನೇರವಾಗಿ ಸರ್ವಿಸ್ ವಯರ್ ನಿಂದ ವಿದ್ಯುತ್ ಹಾಯಿಸಬಹುದು ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಆ ವಿದ್ಯುತ್ ಕಂಬವನ್ನು ಪರಿಶೀಲಿಸಿದ್ದೇವೆ . ಆ ವಿದ್ಯುತ್ ಕಂಬ ಅವರ ಮನೆಯ ಯಾವ ಭಾಗದಲ್ಲಿ ಇದೆ ಎಂದು ನೆನಪಿಲ್ಲ. ಬೇಲಿಯಿಂದ 20 ಮೀಟರ್ ದೂರದಲ್ಲಿ ಆ ವಿದ್ಯುತ್ ಕಂಬ ಇದೆ . ಸಾಕ್ಷಿ ಪುನಃ 2–3 ಮೀಟರ್ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ನಾ ನು ಹೇಳಿದಂತಹ ವಿದ್ಯುತ್ ಕಂಬದ ಪೊಟೊ ತೆಗೆದಿಲ್ಲ. ಪಂಚನಾಮೆಯಲ್ಲಿ ಪಕ್ಕದಲ್ಲಿರುವ ಕಂಬದಿಂದ ವಿದ್ಯುತ್ ಹಾಯಿಸಿದ್ದು ಎಂದು ಹೇಳಿಲ್ಲ. ಎಷ್ಟು ಕಂಬಗಳನ್ನು ಆಯಬೆಕ್ಸ ತಂತಿಗಳನ್ನು ಅಳವಡಿಸಲು ಹಾಕಿದ್ದರು ಎಂದು ಗೊತ್ತಿಲ್ಲ. ಮು,ಮಾ–1 ಕ್ಕೆ ಯಾವುದೇ ಇನ್ಸೂಲೇಟರ್ ಇರಲಿಲ್ಲ.

12. ನಾನು ಹೇಳಿದಂತಹ ಪ್ರಾಣಿ ಬಿದ್ದು ಒದ್ದಾಡಿದೆ ಎಂದು ಹೇಳುವ ಸ್ಥಳದ ಪೊಟೊ ತೆಗೆದಿಲ್ಲ. ಚಾಸಾ–4 ರಿಂದ 7 ರವರು ನಮ್ಮ ಇಲಾಖಾ ಅಧಿಕಾರಿಗಳು ಎಂದರೆ ಸರಿ. ನನು ಹೇಳಿದಂತಹ ಆ

ಸ್ಥಳದಲ್ಲಿ ಸುಮಾರು 2-00 ಗಂಟೆ ಇದ್ದೆವು. ಆ ಅವಧಿಯಲ್ಲಿ ನಮ್ಮನ್ನು ಬಿಟ್ಟು ಬೇರೆ ಯಾರು ಅಲ್ಲಿ ಬಂದಿರುವುದಿಲ್ಲ. ನಿಪಿ-5 ರಿಂದ 7 ರಲ್ಲಿ ಬಹಳಷ್ಟು ಜನರು ಕಾಣುತ್ತಾರೆ ಎಂದರೆ ಸರಿ . ಅವುಗಳನ್ನು ಪೋಸ್ಟಮಾರ್ಟಂ ಮಾಡುವಾಗ ತೆಗೆದದ್ದು ಆಗಿರುತ್ತದೆ. ಪೋಸ್ಟಮಾರ್ಟಂ ಸಂಜೆ 5-00 ಗಂಟೆಗೆ ಮಾಡಲಾಗಿದೆ. 5-00 ಗಂಟೆ ತನಕ ಆರೋಪಿ 1 ಮುತ್ತು 2 ರವರು ನಮ್ಮ ಜೊತೆ ಇದ್ದರು. ನಿಪಿ-5 ರಲ್ಲಿ ಕಾಣುವ ಆರೋಪಿ 1 ಮತ್ತು 2 ರವನ್ನು ಸಿಬ್ಬಂದಿಗಳು ಹಿಡಿದುಕೊಂಡು ನಿಂತಿಲ್ಲ ಅವರಿಬ್ಬರು ನಿರ್ಭಿತದಿಂದ ನಿಂತಿದ್ದಾರೆ ಎಂದರೆ ಸರಿ. ಗುನ್ಹೆ ಯಲ್ಲಿ ಭಾಗಿಯಾದ ಆರೋಪ ಇದ್ದಾಗ ಅಂತಹ ವ್ಯಕ್ತಿಗಳನ್ನು ತಪ್ಪಿಸಬಾರದು ಎಂದು ಹಿಡಿದುಕೊಳ್ಳುತ್ತಾರೆ ಎಂದರೆ ಸರಿ. ನಿಪಿ-5 ರಲ್ಲಿ ನಾನು, ಉಪ ವಲಯಾರಣ್ಯಾಧಿಕಾರಿಯಾದ ಮಾಬು ಸಾಬು ಅಂಕಲಿ, ಚಾಸಾ-5 ಹಾಗೂ ಕ್ಷೇಮಾಭಿವೃದ್ಧಿ ನೌಕರ ಗಣಪತಿ ಸಿದ್ದಿ , ವಾಹನ ಚಾಲಕ ರಾಮು ಇದ್ದೆವೆ. 1 ಮತ್ತು 2 ನೇ ಆರೋಪಿಯ 4-5 ಅಡಿ ದೂರದಲ್ಲಿ ನಾನು ಇದ್ದೆನೆ. ಎಲ್ಲೊ ಸತ್ತು ಬಿದ್ದ ಪ್ರಾಣಿಯ ಪೋಟೊ ತೆಗೆಯುವಾಗ ಅವರಲ್ಲಿ ಬಂದಿದ್ದವರನ್ನು ಸುಳ್ಳಾಗಿ ಆರೋಪಿಗಳಾಗಿ ತೋರಿಸಿದ್ದೇವೆ ಎಂದರೆ ಸರಿಯಲ್ಲ.

13. ಯವಾ ದಿಕ್ಕಿನಿಂದ ಯಾವ ದಿಕ್ಕಿನ ಕಡೆ ಐಬೆಕ್ಸ ತಂತಿ ಅಳವಡಿಸಿದ್ದು ಎಂದು ನೆನಪಿಲ್ಲ. ಮು.ಮಾ-1 ಕಂಬಕ್ಕೆ ಜೋಡಣೆಯಾಗಿತ್ತು. ಅದು ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಸುತ್ತಿಕೊಂಡು ಇತ್ತು. ಅದು 4-5 ಮರದ ಕಂಬಗಳಿಗೆ ಸುತ್ತಿಕೊಂಡು ಇತ್ತು. ಪ್ರತಿ ಕಂಬಕ್ಕೂ ಒಂದು ಸುತ್ತು ಸುತ್ತಿಕೊಂಡಿತ್ತು. ಕಂಬಕ್ಕೆ ಸುತ್ತಿದಾಗ ತಂತಿ ಡೊಂಕಾಗುತ್ತದೆ ಎಂದರೆ ಸರಿ. 5 ಕಂಬಕ್ಕೆ ಸುತ್ತಿದ ಡೊಂಕು ಚಹರೆ ಮು.ಮಾ-1 ರಲ್ಲಿ ಕಾಣುವುದಿಲ್ಲ ಎಂದರೆ ಸಾಕ್ಷಿ ನಾವು ವೃತ್ತಾಕಾರವಾಗಿ ಸುತ್ತಿರುವುದರಿಂದ ಡೊಂಕು ಚಹರೆ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಮೊದಲನೆ ಹಾಗೂ ಕೊನೆಯ ಭಾಗದಲ್ಲಿ ಮಾತ್ರ ಡೊಂಕಾಗಿದ್ದು ಹಾಗೂ ಮಧ್ಯದ ಪೂರ್ತಿ ಭಾಗದಲ್ಲಿ ಯಾವುದೇ ಕುರುಹು ಕಾಣುವುದಿಲ್ಲ ಎಂದರೆ ಸಾಕ್ಷಿ

ನೇರವಾಗಿ ಸುತ್ತಿರುವುದರಿದ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಮು.ಮಾ-1 ವನ್ನು 4-5 ಮರದ ಕಂಬಗಳಿಗೆ ಸುತ್ತಿದ್ದರು ಎಂದು ಹೇಳಿಲ್ಲ. ಮು.ಮಾ-1 ರಂತಹ ತಂತಿ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ . ನಮ್ಮ ಕಚೇರಿಯಲ್ಲಿ ಕೂಡ ಗಿಡ ನೆಡಲು ಉಪಯೋಗಕ್ಕಾಗಿ ಇಂತಹ ತಂತಿ ಇರುತ್ತದೆ ಎಂದರೆ ಸರಿಯಲ್ಲ.

14. ದಿನಾಂಕ 05-01-2022 ರಂದು ನಾನು ಹಳವಳ್ಳಿ ಶಾಖೆಯಲ್ಲಿ ಕರ್ತವ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮಧ್ಯಾಹ್ನ 12-30 ಕ್ಕೆ ಗಸ್ತಿನಲ್ಲಿ ಚಾಸಾ-4 ರ ಜೊತೆ ಇದ್ದದ್ದೆ ಇಲ್ಲ ಹಾಗೂ ಮದ್ದಣ ಮನೆ ನಾಲದಲ್ಲಿ ಕಾಡು ಪ್ರಾಣಿ ಬೇಟೆ ಮಾಡಿ ಸಾಯಿಸಿದ್ದಾರೆ ಎಂಬ ಮಾಹಿತಿ ಬಂದಿದ್ದೆ ಇಲ್ಲ ಎಂದರೆ ಸರಿಯಲ್ಲ. ಸಿದ್ದಿ ಜನಾಂಗದವರು ಹಳವಳ್ಳಿಯಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಯವರು ಸರಿಯಾಗಿ ಕತರ್ವ್ಯ ನಿರ್ವಹಿಸುತ್ತಿಲ್ಲ ಎಂದು ACF ರವರಿಗೆ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 4 ನೇ ಅರೋಪಿ ಸದ್ರಿ ಜನಾಂಗದವರಿಗೆ ಸ್ನೇಹಿತನಾಗಿದ್ದು, ಆ ರೀತಿ ದೂರು ಕೊಟ್ಟಿರುವುದರಿಂದ ಅವರ ವಿರುದ್ದ ನಾನು ಸುಳ್ಳು ಪ್ರಕರಣ ದಾಖ್ಲಲಿಸಿದ್ದೇನೆ ಎಂದರೆ ಸರಿಯಲ್ಲ. ನಾಲದ ಬಳಿ ಹೋದಾಗ ಆರೋಪಿಗಳು ಸತ್ತಿರುವ ಪ್ರಾಣಿಯನ್ನು ತೊಳೆಯುತ್ತಿದ್ದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅವರ ಪೈಕಿ ಇಬ್ಬರು ಓಡಿ ಹೋದರು ಹಾಗೂ 1 ಮತ್ತು 2 ನೇ ಆರೋಪಿಯನ್ನು ಹಿಡಿದುಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಪ್ರಾಣಿಯನ್ನು ಸ್ಥಳದಲ್ಲಿಯೇ ನ್ಯಾಯಾಲಯದ ಅನುಮತಿ ಪಡೆದು ವಿಲೆವಾರಿ ಮಾಡಿರುತ್ತೇವೆ. ಅದನ್ನು ಸುಟ್ಟು ಹಾಕಿ ವಿಲೇವಾರಿ ಮಾಡಿದ್ದೇವೆ ಎಂದು ತೋರಿಸುವ ಪೋಟೊ ಹಾಜರು ಪಡಿಸಿಲ್ಲ, ಆದರೆ ಮಹಜರು ಹಾಜರು ಪಡಿಸಿದ್ದೇವೆ .

15. ಮದ್ದಣ ಮನೆ ಪ್ರದೇಶದಲ್ಲಿ ಯಾವುದೇ ಆರೋಪಿಗಳ ಮನೆಗಳು ಹಾಗೂ ತೋಟಗಳು ಇಲ್ಲ ಎಂದರೆ ಸಾಕ್ಷಿ 1 ನೇ ಆರೋಪಿಯ ತೋಟ ಇದೆ ಎಂದು ನುಡಿಯುತ್ತಾರೆ. 1 ನೇ ಅರೋಪಿಗೆ ಅತಿಕ್ರಮಣ ಮಾಡಿದ ಪ್ರದೇಶದಲ್ಲಿ ತೋಟ ಇದೆ ಎಂದು ನಮ್ಮ ಇಲಾಖೆಯಲ್ಲಿ ದಾಖಲೆ ಇಲ್ಲ. ಅರಣ್ಯ ಗುನ್ನೆ ಆರೋಪ ಯಾವುದೇ ಅರಣ್ಯ ಅತಿಕ್ರಮಣ ದಾರರ ವಿರುದ್ಧ ಇದ್ದಾಗ ಆ ಅರಣ್ಯ ಪ್ರದೇಶ ತೆರವು ಮಾಡಲು ನೋಟಿಸು ಕೊಡುತ್ತೇವೆ. 1 ನೇ ಆರೋಪಿಗೆ ಅಂತಹ ನೋಟಿಸು ಕೊಟ್ಟಿಲ್ಲ. 1 ನೇ ಅರೋಪಿಯ ತೋಟ ಅಲ್ಲಿ ಇಲ್ಲ ಎಂದರೆ ಸರಿಯಲ್ಲ. ಸತ್ತು ಬಿದ್ದ ಪ್ರಾಣಿಯನ್ನು ಉಪಯೋಗಿಸಿ ಅಂಕಿ ಅಂಶಕೋಸ್ಕರ ಅಮಾಯಕರಾದ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ನಾನು ಹೇಳಿದಂತಹ ಗುನ್ನೆ ಮಾಡಿಲ್ಲ ಹಾಗೂ ನಾನು ಹೇಳಿದಂತಹ ಪ್ರಾಣಿಗೂ ಹಾಗೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮದ್ದಣ ಮನೆ ನಾಲದಲ್ಲಿ ನಿಪಿ-1 ನ್ನು ತಯಾರಿಸಿಲ್ಲ ಹಾಗೂ ಕಚೇರಿಯಲ್ಲಿ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. 1 ಮತ್ತು 2 ರವರು ಇದ್ದ ಜಾಗದ ಪೊಟೊ ಹೊಡೆದು ಈ ಪ್ರಕರಣಕ್ಕೆ ಅದನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ನ್ನು ಸೃಷ್ಟಿಸಿಕೊಂಡಿದ್ದು ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ- 1

ಸಿ.ಡಬ್ಲ್ಯೂ-1

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.